# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1389 (1494)

ಸದಸ್ಯರ ಹೆಸರು : ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 17.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತೋಟಗಾರಿಕೆ ಇಲಾಖೆಯಲ್ಲಿ ಹಾಲಿ ಇರುವ ಯೋಜನೆಗಳು ಯಾವುವು ಈ ಯೋಜನೆಗಳಲ್ಲಿ ಸರ್ಕಾರದಿಂದ ನೀಡುವ ಸಾಲದ ಮೊತ್ತ ಮತ್ತು ಸಹಾಯ ಧನ ಯಾವ ಪ್ರಮಾಣದಲ್ಲಿದೆ. | ತೋಟಗಾರಿಕೆ ಇಲಾಖೆಯಲ್ಲಿ ಹಾಲಿ ಇರುವ ಯೋಜನೆಗಳು ಈ ಕೆಳಕಂಡಂತಿದೆ:-<br><br>1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ<br>2. ರಾಷ್ಟ್ರೀಯ ತೋಟಗಾರಿಕೆ ಮಿಷನ್<br>3. ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ - ತಾಳೆ ಎಣ್ಣೆ<br>4. ಪರಂಪರಾಗತ ಕೃಷಿ ವಿಕಾಸ ಯೋಜನೆ<br>5. ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ<br>6. ಕೃಷಿ ಯಾಂತ್ರೀಕರಣ ಉಪ ಅಭಿಯಾನ<br>7. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ<br>8. ಸಮಗ್ರ ತೋಟಗಾರಿಕಾ ಅಭಿವೃದ್ಧಿ<br>9. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ<br>10. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ.<br>11. ಇಲಾಖಾ ಪ್ರಯೋಗ ಶಾಲೆ ಯೋಜನೆ<br>12. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿ<br>13. ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ<br>14. ಬೆಳೆ ವಿಮೆ ಯೋಜನೆ<br><br>ಈ ಯೋಜನೆಗಳಲ್ಲಿ ಸರ್ಕಾರದಿಂದ ವಿವಿಧ ಘಟಕವಾರು ಸಹಾಯಧನ ಪ್ರಮಾಣ ಶೇ. 30 ರಿಂದ ಶೇ. 90 ರವರೆಗೆ ಇರುತ್ತದೆ. ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>ತೋಟಗಾರಿಕೆ ಇಲಾಖೆಯಿಂದ ಸಾಲ ನೀಡುವ ಯೋಜನೆಗಳು ಇರುವುದಿಲ್ಲ. |
| ಆ) | 2023-24 ಮತ್ತು 2024-25ನೇ ಸಾಲಿನವರೆಗೆ ರಾಜ್ಯದಲ್ಲಿ ತೋಟಗಾರಿಕೆಯಲ್ಲಿ ತೊಡಗಿರುವ ಎಷ್ಟು ಜನ ರೈತರಿಗೆ ಯಾವ ಯಾವ | 2023-24 ಮತ್ತು 2024-25ನೇ ಸಾಲಿನವರೆಗೆ ರಾಜ್ಯದಲ್ಲಿ ತೋಟಗಾರಿಕೆಯಲ್ಲಿ ತೊಡಗಿರುವ 3,15,345 ರೈತರಿಗೆ ಮೇಲ್ಕಂಡ ಕ್ರಮ ಸಂಖ್ಯೆ (ಅ)ರಲ್ಲಿ ನಮೂದಿಸಿರುವ ಯೋಜನೆಗಳಡಿ ಅನುಬಂಧದಲ್ಲಿ ವಿವರಿಸಲಾಗಿರುವ ಪ್ರಯೋಜನಗಳನ್ನು ನೀಡಲಾಗಿದೆ.<br>ವರ್ಷವಾರು ವಿವರ ಕೆಳಕಂಡಂತಿದೆ. |

<table>
<tr>
<td></td>
<td>ಪ್ರಯೋಜನಗಳನ್ನು ನೀಡಲಾಗಿದೆ;</td>
<td></td>
<td>
<table>
<tr><th>ವರ್ಷ</th><th>ರೈತರ ಸಂಖ್ಯೆ</th></tr>
<tr><td>2023-24</td><td>119445</td></tr>
<tr><td>2024-25</td><td>195900</td></tr>
<tr><td>ಒಟ್ಟು</td><td>315345</td></tr>
</table>
</td>
</tr>
</table>

ಸಂಖ್ಯೆ: HORTI 117 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು